1	2	3	4	5	6
	ಮುಂಡಗೋಡು	12.514	3961	460	412
	ಸಿದ್ದಾಪುರ	9.388	6.743	402	256
	ಶಿರಸಿ	9.212	7.471	422	549
	ಜೋಯಿಡಾ	2.648	10.826	991	497
	ಯಲ್ಲಾಪುರ	8.728	7.94	373	962
	ಒಟ್ಟು	3155.963	1952.578	207095	148408

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 'ಡಿ' ದರ್ಜೆ ದಿನಗೂಲಿ ನೌಕರರ ಖಾಯಂ.

790(1091) ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 'ಡಿ' ದರ್ಜೆ ದಿನಗೂಲಿ ನೌಕರರುಗಳಿಗೆ ಸರ್ಕಾರ ಕೊಡುತ್ತಿರುವ ಮಾಸಿಕ ವೇತನ ಎಷ್ಟು?

ಆ) ಸದರಿ ನೌಕರರು ದಿನಗೂಲಿ ಹೆಚ್ಚಿಸಲು ಮನವಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಈ ದಿನಗೂಲಿ ನೌಕರರುಗಳನ್ನು ಖಾಯಂ ಮಾಡಲು ಸರ್ಕಾರದವರು ಪರಿಸೀಲಿಸುವರೆ?

ಶ್ರೀ ಬಿ.ಎ. ಮೊಹಿದೀನ್ (ಉನ್ನತ ಶಿಕ್ಷಣ ಸಚಿವರು) :—

ಅ) ಮಾಸಿಕ ರೂ.840.00

ಆ) ಬಂದಿದೆ. ಆ ಬಗ್ಗೆ ಪರಿಶೀಲಿಸಲಾಗುವುದು.

ಇ) ದಿನಾಂಕ: 1.7.84ರ ನಂತರ ನೇಮಕಾತಿ ಹೊಂದಿದ ದಿನಗೂಲಿ ನೌಕರರನ್ನು ಸಕ್ರಮಗೊಳಿಸುವ ಕುರಿತು ಕರ್ನಾಟಕ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:12610 93 ಮತ್ತು 28248-449 98ರಲ್ಲಿ ದಿನಾಂಕ: 22-9-98ರಂದು ನೀಡಿರುವ ಆದೇಶದಲ್ಲಿ ಕಾನೂನಿನ ಪ್ರಕಾರ ಹಾಗೂ ಇಂತಹದೇ ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯದ

ತೀರ್ಪಿನಲ್ಲಿ ಅರ್ಜಿದಾರರ ಪ್ರಕರಣಗಳನ್ನು ಸಕ್ರಮಗೊಳಿಸುವುದನ್ನು ಪರಿಗಣಿಸುವಂತೆ ಆದೇಶಿಸಲಾಗಿದೆ. ಸದರಿ ಆದೇಶದ ವಿರುದ್ಧ ಸರ್ಕಾರವು ವಿಭಾಗೀಯ ಪೀಠಕ್ಕೆ ಮನವಿ ಸಲ್ಲಿಸಿದೆ. ನ್ಯಾಯಾಲಯವು ಮೇಲ್ಮನವಿಯನ್ನು ಅಡ್ಮಿಟ್ ಮಾಡಿದೆ ಹಾಗೂ ಈ ಅಪೀಲು ನ್ಯಾಯಾಲಯದಲ್ಲಿ ಬಾಕಿ ಉಳಿದಿದೆ.

ಸುರತ್ಕಲ್ ಕ್ಷೇತ್ರದಲ್ಲಿ ಅಕ್ರಮ ಮನೆಗಳು ನಿರ್ಮಾಣ.

791(184) ಶ್ರೀ ಕುಂಭೆ ಸುಂದರ್ ರಾವ್ (ಸುರತ್ಕಲ್) :—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರತ್ಕಲ್ ವಿಧಾನಸಭಾ ಕ್ಷೇತ್ರದ ಮೂಡುಶೆಡ್ಡೆಯಲ್ಲಿ ಅಕ್ರಮವಾಗಿ ಕಟ್ಟಲಾದ ಮನೆಗಳ ಸಂಖ್ಯೆ ಎಷ್ಟು? ಆ ಮನೆಗಳಿಗೆ ಪಂಚಾಯತಿ ವತಿಯಿಂದ ಮನೆ ನಂಬರ್ ಕೊಡಲಾಗಿದೆಯೇ? (ವರ್ಷವಾರು ಹೆಸರು ಸಮೇತ ವಿವರ ಒದಗಿಸುವುದು)

ಆ) ಆ ಪ್ರದೇಶದಲ್ಲಿ ಫಲಾನುಭವಿಗಳು ಅಕ್ರಮ ಸ್ವಾದೀನಗಾರರು ಸ್ಟೆಟುಗಳನ್ನು ಮನೆಗಳನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು):—

ಅ) ಅಕ್ರಮವಾಗಿ ಕಟ್ಟಿದ ಮನೆಗಳ ಸಂಖ್ಯೆ 379. 318 ಅಕ್ರಮವಾಗಿ ಕಟ್ಟಿದ ಮನೆಗಳಿಗೆ ಹಿಂದಿನ ಮಂಡಲ ಪಂಚಾಯ್ (ಗುರುಪುರ) ವತಿಯಿಂದ ಮನೆ ನಂಬರ್ ನೀಡಲಾಗಿದೆ. (ವಿವರ ಪ್ರತೇಕವಾಗಿ ಲಗತ್ತಿಸಿದೆ)

ಆ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಮಡಕೇರಿ ತಾಲ್ಲೂಕಿನ ಭಾಗಮಂಡಲದ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆ ವಿಭಾಗಕ್ಕೆ ಮಹಿಳಾ ವೈದ್ಯರ ಕೊರತೆ.

793(602) ಶ್ರೀ ಡಿ.ಎಸ್. ಮಾದಪ್ಪ (ಮಡಕೇರಿ):—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಡಕೇರಿ ತಾಲೋಕಿನ ಭಾಗಮಂಡಲದ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆ ವಿಭಾಗಕ್ಕೆ ಮಹಿಳಾ ಸಿಬ್ಬಂಧಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಮೇಲಿನ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣವೇನು ಹಾಗೂ ಈ ಹುದ್ದೆಗಳನ್ನು ಎಂದಿನಿಂದ ಭರ್ತಿ ಮಾಡಲಾಗುವುದು?